

ತಕ್ಷಣ ಬೆನ್ನಟ್ಟಿ ಹೋಗಿ ನಮ್ಮ ಫೋಟೋಗ್ರಫಿ ಮುಂದುವರೆಸಲು ತಕ್ಷಣ ನಮಗೊಂದು ದೋಣಿ ಬೇಕಿತ್ತು. ಆಗ ಸಿಕ್ಕವನೇ ಈ ಗಾಬರಿ ವೆಂಕಟೇಶ ಮತ್ತವನ ನೀಲಿ ಬಣ್ಣದ ಪುಂಡುದೋಣಿ.

ಸೂರ್ಯನ ಬೆಳಕು ತೀಕ್ಷ್ಣವಾಗುವ ಮೊದಲೇ ನಾವಲ್ಲಿಗೆ ತಲುಪಬೇಕಿತ್ತು. ಬಿಸಿಲು ಹೆಚ್ಚಾದರೆ ಚಿತ್ರಗಳು ಸ್ಪಷ್ಟವಾಗಿ, ನಯವಾಗಿ ಬರುವುದಿಲ್ಲ. ಪಟಗಳಲ್ಲಿ ಪಕ್ಷಿಗಳ ರೆಕ್ಕೆ, ಬಣ್ಣ ಎಲ್ಲವೂ ಸುಟ್ಟುಹೋಗಿ ಫೋಟೋ ಹಾಳಾಗುವ ಅಪಾಯ ಹೆಚ್ಚಿರುತ್ತದೆ. ನಮ್ಮ ಈ ಕ್ಷಣದ ಫೋಟೋಗ್ರಫಿ ಅವಸರ, ಮತ್ತು ಆತಂಕಗಳು ಅಂಬಿಗನಿಗೆ ಕೊಂಚವೂ ಅರ್ಥವಾದಂತೆ ಕಾಣಲಿಲ್ಲ. ಮೇಲಾಗಿ ಆತ ತುಂಬಾ ಗೊಂದಲದಲ್ಲಿದ್ದ. ಗೆಳೆಯನ ಜೊತೆ ಎಲ್ಲೋ ಹೊರಡಲು ಠಾಕುಠೀಕಾಗಿ ಸಿದ್ಧವಾಗಿದ್ದ ಆತ, ಅರೆ ಮನಸ್ಸಲ್ಲೇ ನಮ್ಮ ಜೊತೆ ಬಂದಿದ್ದ. ನಾವಂತೂ ಅವನಿಗೆ ಕಾಡುವ ಪಕ್ಕಾ ಶನಿಗಳ ರೂಪದಲ್ಲಿ ಕಂಡಿರಬೇಕು. ಹಣ ಹೆಚ್ಚಿಗೆ ಕೊಡುತ್ತೇವೆ ಎಂಬ ಆಸೆ ಕೂಡ ಅವನ ತಡೆ ಹಿಡಿದು ನಿಲ್ಲಿಸಲು ಅನುಕೂಲ ಕಲ್ಪಿಸಿತ್ತು.

ದೋಣಿ ಹುಟ್ಟು ಹಾಕುತ್ತಾ ಆತ, 'ಅಣ್ಣ, ಹಿಂಗೆ ಕೇಳ್ತೀನಂತ ಬೇಜಾರಾಗಬೇಡಿ. ಹೆಂಡತಿ ಮಕ್ಕಳು ಬಿಟ್ಟು ಇದ್ಯಾವುದೋ ಸುಡುಗಾಡು ಹಕ್ಕಿಗಳ ಹಿಂದೆ ಜಿದ್ದಿಗೆ ಬಿದ್ದಿರಲ್ಲ. ದುಡಿಮೇಗೆ ನೀವೆಲ್ಲಾ ಏನ್ ಮಾಡ್ಕೊಂಡಿದ್ದೀರ? ನಿಮಿಗ್ಯಾರು ಬೈದು ಬುದ್ಧಿ ಹೇಳೋ ಹಿರೀಕರು ಇಲ್ವಾ? ಇದರ ಪಟ ತಗೊಂಡೋಗಿ ಎಲ್ಲಿ ಮಾರ್ಕೊಳ್ತೀರಿ? ಟೀವಿ ಸಿನಿಮಾದೋರಿಗೆ ಸಪ್ಲೇ ಮಾಡಿ ಕಾಸ್ ಮಾಡ್ಕೋತೀರಾ. ಒಟ್ಟಲ್ಲಿ ನಿಮ್ಮ ದಂಥೆ ಹೆಂಗಂತ ನೀವು ಬಾಯೇ ಬಿಡ್ತಿಲ್ಲವಲ್ಲ!' ಎಂದು ಮುಗ್ಧವಾಗಿ ಪ್ರಶ್ನಿಸುತ್ತಲೇ ಇದ್ದ. ಮೂರನೇ ಕ್ಲಾಸು ಮಾತ್ರ ಓದಿರುವ ಮೀಂಗುಲಿಗ ವೆಂಕಟೇಶನಿಗೆ ನಾವು ಒಮ್ಮೊಮ್ಮೆ ಅನ್ಯಗ್ರಹ ಜೀವಿಗಳಂತೆ ಕಾಣುತ್ತಿದ್ದೆವೋ ಏನೋ? ಮತ್ತೊಮ್ಮೆ ಭಾರಿ ಕಮಾಯಿ ಮಾಡಲು ಬಂದ ಕಳ್ಳಜಾಲದ ಖದೀಮ ಏಜಂಟರುಗಳಂತೆಯೂ ಕಂಡಿರಬಹುದು.

'ಅಯ್ಯೋ ಬಯ್ಯೋದಲ್ಲಪ್ಪ. ಉಗಿದು ಉಪ್ಪಿನಕಾಯಿ ಹಾಕೋದಕ್ಕೆ ರಾಶಿ ಜನ ರೆಡಿ ನಿಂತಿದ್ದಾರೆ. ನಾವೇ ಅವರ ಕೈಗೆ ಸಿಗದಂಗೆ ಓಡಾಡಿಕೊಂಡಿದ್ದೀವಿ. ನಮ್ಮ ಹೆಂಡತಿ ಮಕ್ಕಳು ಐವತ್ತರವತ್ತು ಜನ್ಮಕ್ಕೆ ಆಗೋವಷ್ಟು ಈಗಾಗಲೇ ಬೈದು ಗುಡ್ಡೆ ಹಾಕಿದ್ದಾರೆ.